ಕರ್ನಾಟಕ ಸರ್ಕಾರ
Government of karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: ntse.dsert-ka@nic.in Website: http://dsert.kar.nic.in
Phone - 080 26980100
Fax - 080 26422377
ಡಿಎಸ್ಇಆರ್‌ಟಿ
DSERT

ಸಂಖ್ಯೆ: OB-4/ಕಛೇರಿ catering Tender 12/ 2019-20 ದಿನಾಂಕ:19/06/2020

## ದರಪಟ್ಟಿ ಆಹ್ವಾನ ಪತ್ರ

ಗೆ,

------

------

ವಿಷಯ: 2020–21 ನೇ ಸಾಲಿನ ಜುಲೈ ಮಾಹೆಯಿಂದ ಆಯೋಜಿಸುವ ಕಾರ್ಯಗಾರಗಳಿಗೆ ಊಟೋಪಚಾರದ ದರಪಟ್ಟಿ ಕರೆಯುವ ಬಗ್ಗೆ.

--

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈ ಕಛೇರಿಯ ವಿವಿಧ ಶಾಖೆಗಳಿಂದ 2020–21ನೇ ಸಾಲಿನ ಜುಲೈ ಮಾಹೆಯಿಂದ ಆಯೋಜಿಸುವ ವಸತಿ ಸಹಿತ ಮತ್ತು ವಸತಿ ರಹಿತ ಕಾರ್ಯಗಾರಗಳಲ್ಲಿ ಭಾಗವಹಿಸುವ ಸಂಪನ್ಮೂಲ ವ್ಯಕ್ತಿಗಳಿಗೆ ಉಪಾಹಾರ, ಟೀ/ಕಾಫಿ, ಊಟ, ಸ್ನಾಕ್ಸ್ ಮತ್ತು ಕುಡಿಯುವ ನೀರು ಒದಗಿಸಲು ಹೋಟಲ್ ಮಾಲಿಕರಿಂದ/ ಆಹಾರ ಕೇಟರರ್ಸ್ ಇಂದ ದರಪಟ್ಟಿ ಕರೆಯಲಾಗಿದೆ. ದರಪಟ್ಟಿ ಸಲ್ಲಿಸುವಾಗ ಮುಚ್ಚಿದ (ಸೀಲ್ಡ್) ಲಕೋಟೆಯ ಮೇಲೆ 'Catering Quotation' ಎಂದು ನಮೂದಿಸಿ ಸಲ್ಲಿಸಬೇಕು.

- ಕಾರ್ಯಗಾರದ ಅವಧಿ ಜುಲೈ 2020 ರಿಂದ ಡಿಸೆಂಬರ್ 2020 ರವರೆಗೆ.
- ವಿವಿಧ ದಿನಗಳಲ್ಲಿ ಸಂಖ್ಯೆ : ಕನಿಷ್ಟ 5 ರಿಂದ 10, ಗರಿಷ್ಟ 10–25/50/75 ಇರುತ್ತದೆ.
- ದರಗಳನ್ನು ವಿವಿಧ ಸಂಖ್ಯೆಗಳಿಗೆ ಪ್ರತ್ಯೇಕವಾಗಿ ನಮೂದಿಸುವುದು.

**ಷರತ್ತುಗಳು :**

1. ಸಂಸ್ಥೆಯು ಎಲ್ಲಾ ಶಾಸನಬದ್ಧ ನೋಂದಣಿಗಳನ್ನು ಹೊಂದಿರತಕ್ಕದ್ದು.
2. ದರಪಟ್ಟಿಯು ಎಲ್ಲಾ ರೀತಿಯ ತೆರಿಗೆಗಳನ್ನೊಳಗೊಂಡಂತೆ ಇರತಕ್ಕದ್ದು.
3. ಬಿಲ್ಲು ಪಾವತಿಯು ನಿಯಮಾನುಸಾರ ಕೆ–2 ಮೂಲಕ e- payment ನಂತೆ ಆಗಲಿದೆ.

**ವಸತಿ ಸಹಿತ ಕಾರ್ಯಗಾರಗಳಿಗೆ:**

4. ಬೆಳಿಗ್ಗೆ 6.00, 11.30 ಮತ್ತು ಸಂಜೆ 4.00 ಗಂಟೆಗೆ ಟೀ/ಕಾಫಿ(ಸಂಜೆ 4.00 ಗಂಟೆಗೆ ಸ್ನಾಕ್ಸ್)
5. ಬೆಳಗಿನ ಉಹಾರ 8.00 ರಿಂದ 9.00 ಗಂಟೆಯೊಳಗೆ ಇಡ್ಲಿ, ವಡೆ/ಪೂರಿ, ಸಾಗೂ/ಚೌಚೌ ಬಾತ್/ಬಿಸಿಬೇಳೆ ಬಾತ್/ಪೊಂಗಲ್/ದೋಸೆ, ಪಲ್ಯ ಚಟ್ನಿ.

6. ಮಧ್ಯಾಹ್ನದ ಊಟ(1.00 ರಿಂದ 2.00 ಗಂಟೆಯೊಳಗೆ) ಚಪಾತಿ/ರೊಟ್ಟಿ/ಮುದ್ದೆ. ಪಲ್ಯ, ಸಾಗು, ರೈಸ್ ಬಾತ್/ಚಿತ್ರಾನ್ನ/ಪುಳಿಯೊಗರೆ/ವಾಂಗಿಬಾತ್. ಅನ್ನ, ಸಾಂಬಾರ್, ರಸಂ, ಮೊಸರು/ಮಜ್ಜಿಗೆ, ಸ್ವೀಟ್/ಸಲಾಡ್, ಹಪ್ಪಳ, ಉಪ್ಪಿನಕಾಯಿ, ಬಾಳೆಹಣ್ಣು.
7. ರಾತ್ರಿ ಊಟ 7.00 ರಿಂದ 8.30 ಗಂಟೆಯೊಳಗೆ ಚಪಾತಿ/ರೊಟ್ಟಿ/ಮುದ್ದೆ, ಪಲ್ಯ, ಸಾಗು, ಅನ್ನ,ಸಾಂಬಾರ್,ರಸಂ, ಮೊಸರು/ಮಜ್ಜಿಗೆ,ಹಪ್ಪಳ,ಉಪ್ಪಿನಕಾಯಿ,
8. ಶುದ್ಧ ಕುಡಿಯುವ ನೀರು ವ್ಯವಸ್ಥೆ.

**ವಸತಿ ರಹಿತ ಕಾರ್ಯಗಾರಗಳಿಗೆ:**

9. 11.30 ಮತ್ತು ಸಂಜೆ 4.00 ಗಂಟೆಗೆ ಟೀ/ಕಾಫಿ(ಸಂಜೆ 4.00 ಗಂಟೆಗೆ ಸ್ನಾಕ್ಸ್)
10. ಮಧ್ಯಾಹ್ನದ ಊಟ(1.00 ರಿಂದ 2.00 ಗಂಟೆಯೊಳಗೆ) ಚಪಾತಿ/ರೊಟ್ಟಿ/ಮುದ್ದೆ. ಪಲ್ಯ, ಸಾಗು, ರೈಸ್ ಬಾತ್/ಚಿತ್ರಾನ್ನ/ಪುಳಿಯೊಗರೆ/ವಾಂಗಿಬಾತ್. ಅನ್ನ, ಸಾಂಬಾರ್, ರಸಂ, ಮೊಸರು/ಮಜ್ಜಿಗೆ, ಸ್ವೀಟ್/ಸಲಾಡ್, ಹಪ್ಪಳ, ಉಪ್ಪಿನಕಾಯಿ, ಬಾಳೆಹಣ್ಣು.
11. ಶುದ್ಧ ಕುಡಿಯುವ ನೀರು ವ್ಯವಸ್ಥೆ.

**ಸಾಮಾನ್ಯ :**

1. ಸಿದ್ಧಪಡಿಸಿದ ಆಹಾರವನ್ನು ಮುಚ್ಚಿದ ಪಾತ್ರೆಗಳಲ್ಲಿ ಗುಣಮಟ್ಟ ಹಾಳಾಗದಂತೆ ತಂದು ಬಡಿಸುವುದು.
2. ಸ್ವಚ್ಛತೆ ಮತ್ತು ಆಹಾರದ ಗುಣಮಟ್ಟವನ್ನು ಕಾಪಾಡುವುದು, ಗುಣಮಟ್ಟದಲ್ಲಿ ಯಾವುದೇ ರಾಜಿಯಾಗದಂತೆ ಸರಬರಾಜು ಮಾಡುವುದು ಕಡ್ಡಾಯವಾಗಿರುತ್ತದೆ.
3. ತಯಾರಿಸಿದ ಆಹಾರದ ಸರಬರಾಜು ವ್ಯವಸ್ಥೆ ತಮ್ಮದೇ ಆಗಿರುತ್ತದೆ. ಊಟ ಬಡಿಸಿದ ನಂತರ ಆ ಸ್ಥಳವನ್ನು ಸ್ವಚ್ಛವಾಗಿ ಇಡುವುದು ಆಹಾರ ಸರಬರಾಜುದಾರರ ಕರ್ತವ್ಯವಾಗಿರುತ್ತದೆ.
4. ನಿಗದಿತ ಸಮಯಕ್ಕೆ ಸರಿಯಾಗಿ ಆಹಾರ ಸರಬರಾಜು ವ್ಯವಸ್ಥೆಗೆ ಕ್ರಮವಹಿಸುವುದು.
5. ವಿಳಂಬಕ್ಕೆ ದಂಡ ವಿಧಿಸಬಹುದಾಗಿರುತ್ತದೆ.
6. ಪ್ಲಾಸ್ಟಿಕ್ ಲೋಟ, ಪ್ಲೇಟ್ ಇತ್ಯಾದಿ ಪ್ಲಾಸ್ಟಿಕ್ ಸಾಮಗ್ರಿಗಳನ್ನು ಬಳಸಬಾರದು.

ಮೇಲಿನಂತೆ ಊಟೋಪಚಾರಗಳನ್ನು ಒದಗಿಸಲು ಒಂದು ದಿನಕ್ಕೆ ಒಬ್ಬರಿಗೆ ತಗಲುವ ಒಟ್ಟು ದರವನ್ನು ಮುಚ್ಚಿದ ಲಕೋಟೆಯಲ್ಲಿ ನಮೂದಿಸಿ 'ಮಾನ್ಯ ನಿರ್ದೇಶಕರ ಡಿ.ಎಸ್.ಇ.ಆರ್.ಟಿ ಬೆಂಗಳೂರು –85' ಇವರ ಹೆಸರಿಗೆ ದಿನಾಂಕ:**25/06/2020** ಸಂಜೆ **4.00** ಗಂಟೆಯ ಒಳಗಾಗಿ ತಲುಪುವಂತೆ ಸಲ್ಲಿಸುವುದು.

ದರಪಟ್ಟಿ ಸ್ವೀಕರಿಸಿದ ನಂತರ ಪರಿಶೀಲಿಸಿ ಕಾರ್ಯದೇಶ ನೀಡುವ ಅಥವಾ ತಿರಸ್ಕರಿಸುವ ಪೂರ್ಣ ಅಧಿಕಾರ ನಿರ್ದೇಶಕರದ್ದಾಗಿರುತ್ತದೆ.

ನಿರ್ದೇಶಕರು
ಡಿ.ಎಸ್.ಇ.ಆರ್.ಟಿ
ಬೆಂಗಳೂರು–85
19/06

ಪ್ರತಿಯನ್ನು

1. ಮಾನ್ಯ ಜಿಲ್ಲಾಧಿಕಾರಿಗಳು ಬೆಂಗಳೂರು ನಗರ ಜಿಲ್ಲೆ, ಕೆ.ಜಿ ರಸ್ತೆ ಬೆಂಗಳೂರು ರವರಿಗೆ ಕಳುಹಿಸುತ್ತಾ ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಸಾರ್ವಜನಿಕ ಪ್ರಕಟಣೆ ನೀಡಲು ಕೋರಿದೆ.
2. ಕಛೇರಿ ಪ್ರತಿ.